ಹತ್ತಿರ ಬರುತ್ತಾರೆ, ಸಚಿವರ ಹತ್ತಿರ ಬರುತ್ತಾರೆ, ನಮ್ಮ ಹತ್ತಿರ ಬರುತ್ತಾರೆ, ಅಧಿಕಾರಿಗಳ ಹತ್ತಿರ ಬರುತ್ತಾರೆ. ಹೀಗೆ ಇವರು ಎಲ್ಲರ ಹತ್ತಿರ ಓಡಾಡುತ್ತಾರೆ. We cannot explain their plight and position .... ಇದನ್ನು ವಿವರಿಸುವುದಕ್ಕೆ ಯಾರಿಗೂ ಆಗುವುದಿಲ್ಲ. ಇದಕ್ಕೆ ನಾವು ಏನು ಮಾಡಿದ್ದೇವೆ ಎಂದರೆ, We have taken a decision without going through all these procedural matters as far as recruitments are concerned... ಅವರು ಬಂದರೆ ನಮ್ಮ ಹತ್ತಿರ ನೀವು ಆ ವಿಚಾರವನ್ನು ನಮ್ಮ ಗಮನಕ್ಕೆ ತಂದುಬಿಡಬಹುದು. ನೇರವಾಗಿ ಎಲ್ಲೆಲ್ಲಿ ಪೋಸ್ಟ್‌ಗಳು ಖಾಲಿ ಇವೆ ಎಂದು ನೋಡಿ ಅವರ ವಿದ್ಯಾರ್ಹತೆಗೆ ತಕ್ಕಹಾಗೆ ಅವರಿಗೆ ಡೈರೆಕ್ಟ್ ಆಗಿ ಅಪಾಯಿಂಟ್‌ಮೆಂಟ್ ಆರ್ಡರ್ ಕೊಟ್ಟು ಕಲಿಸತಕ್ಕಂಥ ತೀರ್ಮಾನವನ್ನು ನಾವು ಮಾಡಿದ್ದೇವೆ. ನಮ್ಮ ಭಾಷಣದಲ್ಲಿ ಕೂಡ ಇದನ್ನು ನಮೂದು ಮಾಡಿದ್ದೇನೆ. As far as unemployed uneducated physically handicaped ಏನಿದ್ದಾರೆ ಅವರಿಗೆ ಜನರಲ್ ಆಗಿ ಎಲ್ಲರಿಗೂ ಬಂದ ಹಾಗೆ ಅವರಿಗೂ ಇಂಟರ್‌ವ್ಯೂ ಬರುತ್ತದೆ. ಆದರೆ ಮದುವೆಯಾಗಿರತಕ್ಕಂಥವರು, ಮತ್ತೊಬ್ಬರು, ಅಂತರ್ಜಾತಿ ವಿವಾಹ ಮತ್ತೊಂದು ಆದಾಗ ಕೊನೆಯ ಪಕ್ಷ ಸ್ಪೆಷಲ್ ಆಗಿ ಆದ್ಯತೆ ಕೊಟ್ಟು, ಆ ವಿಚಾರದಲ್ಲಿ ಒತ್ತುಕೊಟ್ಟು ಆ ದಿಶಿಯಲ್ಲಿ ವಿಚಾರ ಮಾಡುವುದು ಒಳ್ಳೆಯದು ಎಂಬ ತಮ್ಮ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಈ ವಿಷಯದಲ್ಲಿ ಮಾನ್ಯ ಭೈರೇಗೌಡರೇ ಸ್ವತಃ ವಿಚಾರ ಮಾಡಬೇಕಾಗಿತ್ತು, ಅವರೇ ವಿಚಾರ ಮಾಡಿಲ್ಲ. ನಾವು ಏನು ಮಾಡುವುದು.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ಅವಧಿ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾಡ ಪ್ರಶ್ನೋತ್ತರಗಳು:

ಲಾಕ್ ಅಪ್ನಲ್ಲಿ ಸಂಭವಿಸಿರುವ ಸಾವುಗಳು.

1325 - ಶ್ರೀ ಅಂಜನಮೂರ್ತಿ (ನೆಲಮಂಗಲ), ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1988ರಿಂದ ತುಮಕೂರು ಜಿಲ್ಲೆಯಲ್ಲಿ ಇದುವರೆವಿಗೂ ಪೊಲೀಸ್ ಠಾಣೆಯಲ್ಲಿ ನಡೆದಿರುವ ಸಾವುಗಳ ಸಂಖ್ಯೆ ಎಷ್ಟು?

ಆ) ಇದಕ್ಕೆ ಕಾರಣರಾರು?

ಇ) ಇದರ ಬಗ್ಗೆ ಸರ್ಕಾರದ ಏನು ಕ್ರಮ ಕೈಗೊಂಡಿದೆ?

ಶ್ರೀ ಧರ್ಮಸಿಂಗ್, (ಗೃಹ ಸಚಿವರು)

ಅ) ಒಂದು.

ಆ) ತುಮಕೂರಿನ ನ್ಯೂ ಎಕ್ಸ್‌ಟೆನ್‌ಷನ್ ಪೊಲೀಸ್ ಠಾಣೆಯ ಪಿ.ಎಸ್.ಐ. ಹಾಗೂ 8 ಜನ ಸಿಬ್ಬಂದಿ.

ಇ) ತುಮಕೂರಿನ ನ್ಯೂ ಎಕ್ಸ್‌ಟೆನ್ಸ್‌ಷನ್ ಪೊಲೀಸ್ ಠಾಣೆಯ ಪಿ.ಎಸ್.ಐ. ಹಾಗೂ ಇನ್ನಿತರ 8 ಜನ ಪೊಲೀಸ್ ಸಿಬ್ಬಂದಿಗಳ ವಿರುದ್ಧ ಒದು ಕೊಲೆ ಪ್ರಕರಣವನ್ನು ದಾಖಲು ಮಾಡಿದೆ. ಸಿ.ಓ.ಡಿ.ಯ ತನಿಖೆಯ ನಂತರ ದೋಷಾರೋಪಣೆ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆ. ಈ ಪ್ರಕರಣ ತುಮಕೂರಿನ ಸಿಷನ್ಸ್ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ. ಇವರು ಸಧ್ಯಕ್ಕೆ ಅಮಾನತ್ತಿನಲ್ಲಿದ್ದಾರೆ.